ಮಾರುತವತಾರನೀತ ನಮ್ಮ ಗುರು ಕಾಣಿರೋ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page no. 455.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 75.
3. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.
4. **Note:** Lyrics in both the references above are same.
5. **Note:** The singer has followed mainly these wordings. But he has added few more wordings and **not used the Ankita** mentioned here.

ರಾಗ: ಶಂಕರಾಭರಣ ತಾಳ: ಆದಿ

ಮಾರುತವತಾರನೀತ ನಮ್ಮ ಗುರು ಕಾಣಿರೋ
ಭಾರತಿಯ ರಮಣನೇ ಮೂಲ ಗುರು ಕಾಣಿರೋ || ಪ ||

ಸಂತತಿ ಸಹಿತ ರಾವಣ ಬಲವ ತರಿದ
ಹೊಂತಕಾರಿ ಹನುಮಂತ ನಮ್ಮ ಗುರು ಕಾಣಿರೋ
ಅಂತಕನ ಪುರಿಗೆ ಕೌರವರನು ಕಳುಹಿದ
ಪಂಥದೊಳು ಭೀಮಸೇನ ಮೂಲ ಗುರು ಕಾಣಿರೋ || 1 ||

ಯತಿ ರೂಪಿನಲಿ ಕ್ಷಿತಿಯ ಮೇಲೆ ನಿಂದು ದು-
ರ್ಮತವ ಖಂಡಿಸಿದಾತ ನಮ್ಮ ಗುರು ಕಾಣಿರೋ
ಶ್ರುತಿಗೆ ಸಮ್ಮತವಾದ ಮತವ ಸ್ಥಾಪಿಸಿ, ಮುಕ್ತಿ
ಪಥವ ತೋರಿಸಿದಾತ ಮೂಲ ಗುರು ಕಾಣಿರೋ || 2 ||

ಹೇಮ, ಭೂಮಿಯ, ಕಾಮಿನಿಯ ವ್ರತವನುಳಿದು ನಿ-
ಸ್ಸೀಮನೆನಿಸಿದಾತ ನಮ್ಮ ಗುರು ಕಾಣಿರೋ
ರಾಮಚಂದ್ರ ಪುರಂದರ ವಿಠಲನ ದಾಸರಾದ
ಶ್ರೀ ಮಧ್ವಾಚಾರ್ಯರೆ ನಮ್ಮ ಗುರು ಕಾಣಿರೋ ‖ 3 ‖

ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:

ಮಾರುತವತಾರ – ಮಾರುತನ ಅವತಾರ.

ಸಂತತಿ ಸಹಿತ – ರಾವಣನ ಒಬ್ಬ ಮಗನಾದ ಅಕ್ಷಯ ಕುಮಾರನನ್ನು ತಾನೇ ಕೊಂದು, ಇನ್ನೊಬ್ಬ ಮಗನಾದ ಇಂದ್ರಜಿತ್ತಿನ ಸಾವಿಗೆ ನೆರವಾದವನು.

ಹೊಂತಕಾರಿ – ನಾನಾ ಉಪಾಯಗಳನ್ನು ಬಲ್ಲವನು.

ಅಂತಕನ ಪುರಿಗೆ – ಯಮನ ಪಟ್ಟಣಕ್ಕೆ.

ಕ್ಷಿತಿ = ಭೂಮಿ

ಹೇಮ ಭೂಮಿಯ ಕಾಮಿನಿಯ ವ್ರಾತವನುಳಿದು – ಹೊನ್ನು, ಮಣ್ಣು, ಹೆಣ್ಣು ಇವುಗಳ ಗುಂಪಿನಿಂದ ದೂರವಾಗಿದ್ದು.

Classification: Keerthane
Ankita: purandara vittala
Location: NA
Category: Hanuma Stuti, Madhwacharya Stuti
Sub-Category: hanuma, hanuma-bhima-madhwa, bhima, madhva, rama, madhwacharya, ravana, yama, kourava, bhumi, shruti, mukti, bangara, hennu, vrata,
Pravachana: NA
Explanation: NA